# ಸ್ಟಾರ್ ವಾರ್ ದರುಶನ

‘ನಾವೆಲ್ಲಾ ಬೇರೆ ಬೇರೆ ಭಾಷೆಯ ಚಿತ್ರಗಳಿಂದ ಸ್ಪರ್ಧೆ ಎದುರಿಸಬೇಕು. ತಮಿಳು, ತೆಲುಗು, ಬಾಲಿವುಡ್ ಸ್ಟಾರ್‌ಗಳ ಸಿನಿಮಾಗಳ ಜತೆ ಹೋರಾಡಿ ಗೆಲ್ಲುವ ನಾವೇ ನಿಜವಾದ ನಾಯಕರು. ಅವರಿಗೆ ಬೇರೆಯವರ ಸವಾಲಿನ ಭೀತಿ ಇಲ್ಲ. ಎಲ್ಲರನ್ನೂ ಎದುರಿಸುವ ತಾಕತ್ತಿದೆ. ಹಾಗಾಗಿ ನಾವೇ ನಿಜವಾದ ಸ್ಟಾರ್ ಗಳು...’

ನೀಳಕಾಯದ ನಟ ಎದೆಯುಬ್ಬಿಸಿಕೊಂಡು ಹೀಗೆ ಹೇಳಿಕೊಳ್ಳುತ್ತಿದ್ದಾಗ ಅವರೇ ಸಾಕಿದ್ದ ಪಂಜರದೊಳಗಿನ ಗಿಳಿ ಕಣ್ಣು ಪಿಳಿಪಿಳಿಸುತ್ತಿತ್ತು. ಅದಕ್ಕೆ ಮಾತನಾಡಲು ಬರುತ್ತಿರಲಿಲ್ಲ. ಅವರಿಗೆ ಪ್ರಾಣಿಗಳೆಂದರೆ ಬಲು ಪ್ರೀತಿ. ಕೆಲವು ಚಿತ್ರಗಳಲ್ಲಿ ತಾವೇ ಸಾಕಿದ ಕುದುರೆಗಳ ಮೇಲೆ ಸವಾರಿ ಮಾಡಿದ್ದಿದೆ. ಆಗೀಗ ಮೈಸೂರಿನಲ್ಲಿರುವ ತಮ್ಮ ಫಾರ್ಮ್ ಹೌಸ್‌ಗೆ ಹೋಗಿ ಸಾಕುಪ್ರಾಣಿಗಳ ಯೋಗಕ್ಷೇಮ ವಿಚಾರಿಸಿಕೊಂಡು ಬರುತ್ತಿರುತ್ತಾರೆ.

ಲಾಂಗ್‌ಬ್ಯಾಕ್ ಲಾಂಗ್ ಹಿಡಿದ ಅವರು ಕೆಲವು ಚಿತ್ರಗಳಲ್ಲಿ ಕಣ್ಣುಗಳು ಬೇರೆ ರೀತಿ ಕಾಣಲೆಂದು ಲೆನ್ಸ್ ಹಾಕಿಕೊಂಡು ಅಭಿನಯಿಸಿದರು. ಚಿತ್ರವೊಂದರಲ್ಲಿ ಕುರುಡನ ಪಾತ್ರದಲ್ಲೂ ಕಾಣಿಸಿಕೊಂಡು ಸೈ ಎನಿಸಿಕೊಂಡರು. ರೀಮೇಕ್, ರೀಮಿಕ್ಸ್ ಎರಡೂ ಅವರಿಗೆ ಆರನೇ ಪ್ರಾಣ. ಅಷ್ಟೊಂದು ಭಾಷೆಗಳ ಸ್ಟಾರ್‌ಗಳ ಜೊತೆ ಸೆಣೆಸುವುದೆಂದರೆ ತಮಾಷೆಯೇ?

ಯಾಕಿಷ್ಟು ರೀಮೇಕ್ ಮೋಹ ಎಂದರೆ, ‘ಕಥೆಗಾರರನ್ನು ಹಿಡಿದು ತನ್ನಿ’ ಎಂದು ಥೇಟ್ ಸ್ಟಾರ್ ಶೈಲಿಯಲ್ಲೇ ಮರುಪ್ರಶ್ನೆ ಎಸೆದು, ಚಕಿತಗೊಳಿಸಿದವರಂತೆ ಬೀಗುತ್ತಾರೆ. ಒಮ್ಮೆ ಅವರ ಖಾಸಗಿ ಬದುಕು ಹಳಸಿತ್ತು. ಪತ್ನಿ ಅವರ ವಿರುದ್ಧ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು. ಸಿನಿಮಾ ಒಂದರ ಚಿತ್ರೀಕರಣ ನಡೆಯುವ ಸಂದರ್ಭದಲ್ಲೇ ಅವರು ಜೈಲಿನಲ್ಲೂ ಇದ್ದದ್ದೊಂದು ವ್ಯಂಗ್ಯ.

ಹಾಗಾದ ಮೇಲೂ ಅವರ ಯಶಸ್ಸಿನ ಗ್ರಾಫ್ ತಗ್ಗಲಿಲ್ಲ. ಪತ್ನಿ ಹಾಗೂ ಅವರ ಸಂಬಂಧ ಸರಿಹೋಯಿತು. ಮನೆಯಲ್ಲಿನ ಪ್ರಾಣಿ–ಪಕ್ಷಿಗಳು ಆನಂದತುಂದಿಲವಾದವು. ‘ನಾವೂ ಮನುಷ್ಯರೇ ಸ್ವಾಮಿ, ತಪ್ಪು ಆಗುತ್ತದೆ. ಕ್ಷಮಿಸಿಬಿಡಿ’ ಎಂದು ಕೈಜೋಡಿಸಿ ಅಭಿಮಾನಿಗಳಲ್ಲಿ ಮೊರೆಯಿಟ್ಟದ್ದೇ ಅವರೆಲ್ಲಾ ಕರಗಿಹೋದರು. ಅನಿಮೇಷನ್ ಚಿತ್ರವೊಂದರ ಆತ್ಮವನ್ನು ಅನಾಮತ್ತಾಗಿ ಎತ್ತಿಕೊಂಡು ತಮ್ಮನೇ ನಿರ್ದೇಶಿಸಿ, ಅವರು ನಾಯಕನಟರಾದ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಭಾರೀ ಗೆಲುವು ಸಾಧಿಸಿತು. ಅದು ಅನಿಮೇಷನ್ ಚಿತ್ರದ್ದೇ ಕಥೆ ಎಂಬುದನ್ನು ಅವರು ಒಪ್ಪಿಕೊಂಡ ನಂತರ ಅದಕ್ಕೆ ಶ್ರೇಷ್ಠ ಜನಪ್ರಿಯ ಚಿತ್ರ ವಿಭಾಗದ ರಾಜ್ಯ ಪ್ರಶಸ್ತಿಯೂ ಸಂದದ್ದು ‘ಅದೃಷ್ಟ ಬಂದರೆ ಒದ್ದುಕೊಂಡು ಬರುತ್ತದೆ’ ಎಂಬುದಕ್ಕೆ ಸಾಕ್ಷಿ.

ಈಗಲೂ ಅವರಿಗೆ ಪ್ರಾಣಿಗಳನ್ನು ಕಂಡರೆ ಇಷ್ಟ. ಐತಿಹಾಸಿಕ ಚಿತ್ರವೊಂದು ಭಾರೀ ಯಶಸ್ಸು ಕಂಡಮೇಲಂತೂ ಅವರ ಸಂಭಾವನೆ ಗಗನಕ್ಕೇರಿದೆ. ದಾಂಪತ್ಯ ಗೀತೆಯಲ್ಲಿ ಎದ್ದಿದ್ದ ಅಪಸ್ವರ ದೂರವಾಗಿದೆ. ಅವರ ಮನೆಯ ಹೊರಗೆ ನಿತ್ಯವೂ ಅಭಿಮಾನಿಗಳು ಹಸ್ತಾಕ್ಷರಕ್ಕೆ ಕಾದು ನಿಲ್ಲುತ್ತಾರೆ. ಕೆಲವರಂತೂ ನೆಚ್ಚಿನ ನಟನ ಸಿನಿಮಾ ಸ್ಟಿಲ್ ಅಥವಾ ಫೋಟೊ ಇರುವ ಟಿ–ಶರ್ಟ್ ಧರಿಸಿ ಬರುತ್ತಾರೆ. ದೂರದಿಂದಲೇ ಅವರಿಗೆ ಕೈಬೀಸುವ ನಾಯಕನಿಗೆ ಈಗೀಗ ಅವರಿಗೆ ಹಸ್ತಾಕ್ಷರ ಹಾಕುವಷ್ಟು ಪುರುಸೊತ್ತು ಇಲ್ಲವಾಗಿದೆ. ಕಥೆಗಾಗಿ ಹುಡುಕಾಡಬೇಕಲ್ಲ; ಅದಕ್ಕೇ ಅವರು ಪರಭಾಷಾ ಚಿತ್ರಗಳ ಸಿ.ಡಿ.ಗಳನ್ನು ಅನೂಚಾನವಾಗಿ ನೋಡುತ್ತಿರುತ್ತಾರೆ. ಕಸರತ್ತನ್ನು ಹೊರತುಪಡಿಸಿ ಇದು ಅವರ ನೆಚ್ಚಿನ ಹವ್ಯಾಸ.

-ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68